**ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು ಹಾಗೂ ಸಕ್ಷಮ ಪ್ರಾಧಿಕಾರಿಗಳು.**

**2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–27**

**ದೂ: 080 – 22109665** **ಇ–ಮೇಲ್: competentauthoritysdg2023@gmail.com**

ಸಂಖ್ಯೆ: ಕೆ.ಪಿ.ಐ.ಡಿ–2(7)/ಶ್ರೀವಸಿಷ್ಠ/2022–23 ದಿನಾಂಕ: 19.05.2023

## ಸಾರ್ವಜನಿಕ ಪ್ರಕಟಣೆ

**'ಶ್ರೀ ವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು,** ದೂಷಿತ ಸಹಕಾರಿಯ ಠೇವಣಿದಾರರು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ2004 ರ ಕಲಂ 7(2) ರ ಅನ್ವಯ ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳಿವಳಿಕೆ.

ಕೆ.ಪಿ.ಐ.ಡಿ.ಎಫ್.ಇಕಾಯ್ದೆ2004 ರ ಕಲಂ 5(1) ರ ಅನ್ವಯ **ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ,ಬೆಂಗಳೂರು** ಇವರನ್ನು **'ಶ್ರೀವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಬೆಂಗಳೂರು'**ದೂಷಿತ ಸಹಕಾರಿಯ ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ.ಕ್ಲೇಮು ಅರ್ಜಿಗಳನ್ನು ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, ಐ.ಎಂ.ಎ ಹಾಗೂ ಇತರೆ ವಂಚನೆ ಪ್ರಕರಣಗಳು, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ।ಬಿ.ಆರ್.ಅಂಬೇಡ್ಕರ್‌ರಸ್ತೆ, *ಬೆಂಗಳೂರು ರವರ* ಕಛೇರಿಯಲ್ಲಿ ವಿತರಿಸಲಾಗುವುದು. ಹಾಗೂ ಠೇವಣಿದಾರರು/ಅಧಿಕೃತ ಪ್ರತಿನಿಧಿ/ ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ. ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ **ದಿನಾಂಕ: 25.05.2023 (ಗುರುವಾರ) ಈ ಪ್ರಾರಂಭಿಕ ದಿನಾಂಕದಿಂದ ಒಂದು ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸುವ ಕಡೆಯ ದಿನಾಂಕ: 23.06.2023 (ಶುಕ್ರವಾರ) ಸಂಜೆ 5.30** ರೊಳಗಾಗಿ ಅಥವಾ ಅದಕ್ಕಿಂತ ಮುಂಚಿತವಾಗಿ ತಮ್ಮ ಕ್ಲೇಮು ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು/ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

| ಕ್ರಮ ಸಂ. | ಠೇವಣಿದಾರರು/ ಠೇವಣಿದಾರರ ಸಂಬಂಧಿಕರು | ಸಲ್ಲಿಸಬೇಕಾಗಿರುವ ದಾಖಲೆಗಳು |
|---|---|---|
| 1. | **ಠೇವಣಿದಾರರು (Depositor)** | ಠೇವಣಿದಾರರು ದಾಖಲೆಗಳನ್ನು ನೋಟರಿ/ಪತ್ರಾಂಕಿತಅಧಿಕಾರಿ/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು |
| 2. | **ನಾಮಿನಿದಾರರು (Nominee)** | 1. ಠೇವಣಿದಾರರ ಮರಣ ಪ್ರಮಾಣಪತ್ರ 2. ವಂಶವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು |
| 3. | **ವಾರಸುದಾರರು (Legal heirs)** | 1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟನಾಮಿ (**Nominee**)ರವರ ಮರಣ ಪ್ರಮಾಣ ಪತ್ರ<br>4. ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದಆದೇಶ<br>5.ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.<br>6. ಉಳಿದ ವಾರಸುದಾರರ ಒಪ್ಪಿಗೆ*(Consent from other legal heirs*) |
| 4. | **PoA(Power of Attorney)** | 1. ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು. (ಗಂಭೀರ ಆರೋಗ್ಯ ಸಮಸ್ಯೆ ಇರುವವರು). ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು.<br>2. ಹೊರದೇಶದಲ್ಲಿ ವಾಸಿಸುತ್ತಿರುವವರು Apostalised copy citizen card+Passport<br>3. ಮೇಲಿನ ಕ್ರ. ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized |

| | | |
|---|---|---|
| | | Power of Attorney certificate ಸಲ್ಲಿಸತಕ್ಕದ್ದು.<br>4. **PoA**. ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 5. | **ಅಪ್ರಾಪ್ತರ ಗಾರ್ಡಿಯನ್ (ಪೋಷಕರು)** | 1. ಠೇವಣಿದಾರರ ಮರಣ ಪತ್ರ 2. ಗಾರ್ಡಿಯನ್ ನೇಮಕದ ದಾಖಲೆ<br>3. ಸ್ವಯಂ ದೃಢೀಕೃತ ದಾಖಲೆ |

**ಕ್ಲೇಮುಅರ್ಜಿಯನ್ನು ಸಲ್ಲಿಸುವಅರ್ಜಿದಾರರು ಪ್ರತಿ ಸಹಕಾರಿಯ ಹೂಡಿಕೆಗೆ ಸಂಬಂಧಿಸಿದ ಈ ಕೆಳಕಂಡ ಎಲ್ಲಾಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.**

| ಕ್ರ. ಸಂ. | ಠೇವಣಿದಾರರು/ ಠೇವಣಿದಾರರ ಸಂಬಂಧಿಕರು | ಸಲ್ಲಿಸಬೇಕಾಗಿರುವ ದಾಖಲೆಗಳು |
|---|---|---|
| 1. | **ಉಳಿತಾಯ ಠೇವಣಿ** (Savings Deposit) | 1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2. ಸಹಕಾರಿಯು ನೀಡಿರುವ ಉಳಿತಾಯ ಠೇವಣಿ ಪಾಸ್ ಪುಸ್ತಕ<br>3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ(Transaction statement page in passbook of claimed amount)<br>*ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 2. | **ನಿಶ್ಚಿತ ಠೇವಣಿ (Fixed Deposit)** | 1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2.ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ<br>3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ(Transaction statement page in passbook of claimed amount)<br>*ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 3. | **ಸಂಚಿತಠೇವಣಿ (Cumulative Deposit)** | 1.ಭಾವಚಿತ್ರಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.<br>2.ಸಂಚಿತ ಠೇವಣಿ ಪ್ರಮಾಣ ಪತ್ರ<br>3.ಪಾಸ್ ಪುಸ್ತಕದಲ್ಲಿಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ(Transaction statement page in passbook of claimed amount)<br>*ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 4. | **ಆವರ್ತ ಠೇವಣಿ (Recurring Deposit)** | 1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು<br>2. ಸಹಕಾರಿಯು ನೀಡಿರುವ ಆವರ್ತ ಠೇವಣಿ ಪಾಸ್ ಪುಸ್ತಕ<br>3 .ಪಾಸ್ ಪುಸ್ತಕದಲ್ಲಿಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ( Transaction statement page in passbook of claimed amount)<br>*ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 5. | **ವಸಿಷ್ಠ ವಿಶೇಷ** | 1.ಭಾವಚಿತ್ರಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು |

| | | |
|---|---|---|
| | **ಹೂಡಿಕೆ ( Vasista Special Investment)** | 2.ವಸಿಷ್ಠವಿಶೇಷ ಹೂಡಿಕೆ ಪ್ರಮಾಣ ಪತ್ರ<br>3.ಪಾಸ್ ಪುಸ್ತಕದಲ್ಲಿಠೇವಣಿದಾರರು ಹಣ ಸಂದಾಯಮಾಡಿದ ಬಗ್ಗೆ ವಹಿವಾಟಿನ ವಿವರ ( Transaction statement page in passbook of claimed amount)<br>*ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**ದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 6. | **ಪೂರಕ ದಾಖಲೆಗಳು (Supporting documents)** | 1.ಭಾವಚಿತ್ರಇರುವ ಪಾಸ್ ಪುಸ್ತಕದ ಮುಖಪುಟ (Front page) ನಕಲು<br>2.ಠೇವಣಿದಾರರ ಹೆಸರು ನಮೂದಿಸಿ ರದ್ದು ಮಾಡಿರುವ ಚೆಕ್ ಪ್ರತಿ (Cancelled Cheque leaf)<br>*ಠೇವಣಿದಾರರು/ನಾಮಿನಿದಾರರು/ವಾರಸುದಾರರು/**PoA**zಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. |
| 7. | **ಮೂಲ ಬಾಂಡ್/ಇತರೆ ಪಡೆದು ಬದಲಿ ನೀಡಿದ ದಾಖಲೆಗಳು** | 1.ಭಾವಚಿತ್ರಇರುವ ಪಾಸ್ ಪುಸ್ತಕದ ಮುಖಪುಟ (Front page) ನಕಲು<br>2.<br>3. |

- ಮೇಲಿನ ಕ್ರಮ ಸಂಖ್ಯೆ 1 ರಿಂದ 7 ರಲ್ಲಿ ತಿಳಿಸಿರುವ 'ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖಪುಟ(Front page) ನಕಲು' ಅಂದರೆ ಶ್ರೀವಸಿಷ್ಠ ಸೌಹಾರ್ದ ಸಹಕಾರಿಗೆ ಹೂಡಿಕೆ ಉದ್ದೇಶಕ್ಕಾಗಿ ಯಾವ ಬ್ಯಾಂಕಿನಿಂದ ಹಣ ವರ್ಗಾವಣೆ ಮಾಡಲಾಗಿದೆಯೋ ಆ ಬ್ಯಾಂಕಿನ ಪಾಸ್ ಪುಸ್ತಕ.
- ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
- ಸುಳ್ಳು ದಾಖಲೆಗಳ ಆಧಾರ ಅರ್ಜಿ ಅಥವಾ ಸ್ವಯಂ-ಸೃಷ್ಟಿತ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರ ವಿರುದ್ಧ ಕ್ರಮ ಜರುಗಿಸಲಾಗುವುದು.
- ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಅವಧಿ ಅಂದರೆ ದಿನಾಂಕ : **25.05.2023(ಗುರುವಾರ) ರಿಂದ 23.06.2023(ಶುಕ್ರವಾರ)**ರೊಳಗಾಗಿ, ಸಮಯ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 05.30ರವರೆಗೆ ಮಾತ್ರ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ.
- ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು *ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು (ಐ.ಎಂ.ಎ. ಹಾಗೂ ಇತರೆ ವಂಚನೆ ಪ್ರಕರಣಗಳು) ರವರ ಕಛೇರಿ, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ। ಬಿ.ಆರ್.ಅಂಬೇಡ್ಕರ್ ರಸ್ತೆ, ಬೆಂಗಳೂರು* ಕಛೇರಿಗೆ ಖುದ್ದು ಭೇಟಿ ನೀಡಿ *ಮಾಹಿತಿ ಪಡೆಯಬಹುದಾಗಿರುತ್ತದೆ* ಅಲ್ಲದೇ ----ವೆಬ್ ಸೈಟ್‌ನಿಂದ ಮಾಹಿತಿಯನ್ನು ಪಡೆಯುವುದು. ದೂರವಾಣಿ :080-*22109665, 22109670* -ಬೆಳಿಗ್ಗೆ 10.00 ರಿಂದ ಸಂಜೆ 05.30ರವರೆಗೆ ಸಂಪರ್ಕಿಸಲು ಸೂಚಿಸಿದೆ.
- ಠೇವಣಿದಾರರು/ಅಧಿಕೃತ ಪ್ರತಿನಿಧಿ/ ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಸ್ಪಷ್ಟವಾದ ಪಬ್ಲಿಕ್ ಭಾವಚಿತ್ರ ಹೊಂದಿರುವ ಗುರ್ತಿನಚೀಟಿ/ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಸಂದರ್ಭಾನುಸಾರ ಹಾಜರುಪಡಿಸಿದ್ದಲ್ಲಿ ಕ್ಲೇಮ್ ಅರ್ಜಿಗಳನ್ನು ವಿತರಿಸಲಾಗುವುದು. ಠೇವಣಿದಾರರು ಅಥವಾ ನಾಮಿನಿದಾರರು ಅಥವಾ **PoA** ಹೊಂದಿರುವವರು ಮಾತ್ರ ಖುದ್ದಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿಗಳನ್ನು ಮಧ್ಯವರ್ತಿಗಳು ಸಲ್ಲಿಸಲು ಅವಕಾಶವಿರುವುದಿಲ್ಲ.
- **ಅರ್ಜಿ ಪಡೆಯುವ/ಸಲ್ಲಿಸುವ ಸ್ಥಳ** : *ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು, (ಐ.ಎಂ.ಎ. ಹಾಗೂ ಇತರೆ ವಂಚನೆ ಪ್ರಕರಣಗಳು) ರವರ ಕಛೇರಿ, 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ। ಬಿ.ಆರ್.ಅಂಬೇಡ್ಕರ್ರಸ್ತೆ, ಬೆಂಗಳೂರು.*
- ಅರ್ಜಿದಾರರು 'ಶ್ರೀವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿ, ಬೆಂಗಳೂರು', ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

**ಸಹಿ/–**

**ಸಕ್ಷಮ ಪ್ರಾಧಿಕಾರಿಗಳು**

**ಶ್ರೀವಸಿಷ್ಠ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ,ಬೆಂಗಳೂರು**

ಕೆ.ಪಿ.ಐ.ಡಿ–2(7)/ಶ್ರೀವಸಿಷ್ಠ/2022–23

**ಹಾಗೂ ಸಹಕಾರ ಸಂಘಗಳ ಲೆಕ್ಕಪರಿಶೋಧನಾಜಂಟಿ**

**ನಿರ್ದೇಶಕರು**

**ಕೇಂದ್ರ ಕಛೇರಿ,ಬೆಂಗಳೂರು**